**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ ಉತ್ತರ ಕನ್ನಡ : ಕಾರವಾರ**

**ಸ್ಪೆಷಲ್ ಕೇಸ್ ನಂ. 3/2010**

**ದೋ.ಸಾ. : 49 ಪ್ರಾ.ಸಾ. : 20**

ಸಾಕ್ಷಿಯ ಹೆಸರು : ಬಂಗಾರಯ್ಯ
ತಂದೆಯ ಹೆಸರು : ರಾಮಾ ನಾಯ್ಕ
ವಯಸ್ಸು : 76 ವರ್ಷ
ಉದ್ಯೋಗ : ಏನೂ ಕೆಲಸ ಇಲ್ಲ
ವಾಸ : ಕಾನಗೋಡು , ಸಿದ್ದಾಪುರ

**ದಿನಾಂಕಃ 26-04-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ**

1. ನಾನು ಹುಟ್ಟಿದಾಗಿನಿಂದ ಕಾನಗೋಡು ಗ್ರಾಮದಲ್ಲಿ ವಾಸ ಇದ್ದೇನೆ. ನನ್ನ ಮನೆಗೆ ಶೌಚಾಲಯ ಇರುವುದಿಲ್ಲ. 2001-2002 ರಲ್ಲಿ ಸರ್ಕಾರ ಸ್ವಚ್ಛ ಗ್ರಾಮ ಯೋಜನೆಯಡಿಯಲ್ಲಿ ನಮ್ಮ ಗ್ರಾಮದಲ್ಲಿ ಎಲ್ಲರಿಗೂ ಶೌಚಾಲಯ ನಿರ್ಮಿಸಿಕೊಳ್ಳಲು ಸಹಾಯ ಧನ ನೀಡುತ್ತಿದ್ದದ್ದು ನನಗೆ ಗೊತ್ತಿಲ್ಲ. ನನಗೆ ಸಹಾಯ ಧನ ರೂ. 3000/- ಪಾವತಿ ಮಾಡಿಲ್ಲ. ಆರೋಪಿ ನನಗೆ ಗೊತ್ತು . ಆರೋಪಿ ಗ್ರಾಮ ಪಂಚಾಯತಿ ಅಧ್ಯಕ್ಷ ಆಗಿದ್ದದ್ದು ನನಗೆ ಗೊತ್ತಿಲ್ಲ ಕಾರಣ ನಾನು ಆಗ ಶಿವಮೊಗ್ಗದಲ್ಲಿ ಗದ್ದೆ ಕೆಲಸ ಮಾಡುತ್ತಿದ್ದೆ. ಮೇಲ್ಕಂಡ ಯೋಜನೆಯಡಿಯಲ್ಲಿ ನನ್ನನ್ನು ಫಲಾನುಭವಿಯನ್ನಾಗಿ ಆಯ್ಕೆ ಮಾಡಿದ್ದರು ಮತ್ತು ನನಗೆ ರೂ. 3000/- ಸಹಾಯ ಧನ ಮಂಜೂರಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಆ ಹಣವನ್ನು ನನಗೆ ಕೊಟ್ಟಿಲ್ಲ ಎಂದು ಪೊಲೀಸ್ ನವರಿಗೆ ನಾನು ಹೇಳಿಕೆಯನ್ನು ಕೊಟ್ಟಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಮಾನ್ಯ ಅಭಿಯೋಜಕರು ಅನುಮತಿಯನ್ನು ಕೇಳುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಗಮನಿಸಿ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ವಿಶೇಷ ಸರಕಾರಿ ಅಭಿಯೋಜಕರಿಂದ**

2. ನಾನು ಪೊಲೀಸ್ ನವರ ಮುಂದೆ ನಿ.ಪಿ. 56 ರ ಪ್ರಕಾರ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಆ ರೀತಿ ಹೇಳಿಕೆ ಕೊಟ್ಟಿದ್ದರೂ ನಾನು ಆರೋಪಿಗೆ ಸಹಾಯ ಮಾಡುವುದಕ್ಕಾಗಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀಮತಿ ಎಚ್ ಎಂ ಜಿ ರವರು**

ಏನೂ ಇಲ್ಲ ಎಂದು ಹೇಳಿದ್ದಾರೆ.

**ಮರು ವಿಚಾರಣೆಃ – ಇಲ್ಲ –**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ